ಅ) ಮಂಜೂರಾದ ಹಣ – ರೂ. 160.50 ಲಕ್ಷಗಳು

ಆ) ಬಿಡುಗಡೆಯಾದ ಹಣ – ರೂ. 157.16 ಲಕ್ಷಗಳು

ಇ) ವಿನಿಯೋಗಿಸಿದ ಹಣ – ರೂ. 151.70 ಲಕ್ಷಗಳು

590 (992) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಜಿರಾದ್) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬಿ.ಪಿ.ಎಲ್. ಕಾರ್ಡುಗಳನ್ನು ವಿತರಣೆ ಮಾಡುವ ಕಾರ್ಯ ಯಾವ ಹಂತದಲ್ಲಿದೆ;

ಈ ಬಗ್ಗೆ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆಯೇ ಹಾಗೂ ಇದರ ಅನ್ವಯ ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಎಷ್ಟು ಜನ ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿದೆ. (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ಈ ಸಾಲಿನಲ್ಲಿ ಎಷ್ಟು ಬಿ.ಪಿ.ಎಲ್. ಕಾಡುಗಳನ್ನು ವಿತರಣೆ ಮಾಡುವ ಗುರಿ ಹೊಂದಲಾಗಿದೆ; ಕಳೆದ 1 ವರ್ಷದಲ್ಲಿ ಎಷ್ಟು ಬಿ.ಪಿ.ಎಲ್. ಕಾರ್ಡುಗಳನ್ನು ವಿತರಣೆ ಮಾಡಲಾಗಿದೆ;

ಇ) ಮೇಲ್ಕಂಡ ಯೋಜನೆಗೆ ನಿಗದಿಪಡಿಸಲಾದ ಹಣವೆಷ್ಟು ಹಾಗೂ ಇಲ್ಲಿಯವರೆವಿಗೆ ಬಿಡುಗಡೆ ಮಾಡಲಾದ ಹಣವೆಷ್ಟು;

ಈ) ಆಹಾರ ವಲಯಕ್ಕೆ ಈ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಯೋಜನೆಗಳಿಗಾಗಿ ಎಷ್ಟೆಷ್ಟು ಹಣವನ್ನು ನಿಗದಿ ಪಡಿಸಲಾಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಮನೆ–ಮನೆ ಸಮೀಕ್ಷಾ ಕಾರ್ಯ ಪೂರ್ಣಗೊಂಡಿದ್ದು, ಸಮೀಕ್ಷೆಯಲ್ಲಿ ಗುರುತಿಸಿದ ಅರ್ಹ ಫಲಾನುಭವಿಗಳಿಗೆ ಗಣಕೀಕೃತ ತಾತ್ಕಾಲಿಕ ಪಡಿತರ ಚೀಟಿಗಳನ್ನು ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

(ರಾಜ್ಯದಲ್ಲಿ ಗುರುತಿಸಿರುವ ಅರ್ಹ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ ತಖ್ತೆ ಲಗತ್ತಿಸಿದೆ)

ಆ) ಪ್ರತಿ ವರ್ಷ ಬಿಪಿಎಲ್ ಪಡಿತರ ಚೀಟಿ ವಿತರಿಸುವ ಕಾರ್ಯಕ್ರಮ ಇರುವುದಿಲ್ಲ. ಈಗ ಸಮೀಕ್ಷಾ ಕಾರ್ಯ ಪೂರ್ಣಗೊಂಡಿರುವುದರಿಂದ ಸಮೀಕ್ಷೆಯಲ್ಲಿ ಗುರುತಿಸಿದ ಎಲ್ಲಾ ಕುಟುಂಬಗಳಿಗೆ ಅವರ ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತದೆ.

ಕಳೆದ 1 ವರ್ಷದಲ್ಲಿ 6,627 ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

ಇ) ಈ ಕಾರ್ಯಕ್ರಮದಲ್ಲಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

ಈ) ಆಹಾರ ಇಲಾಖೆಗೆ ಈ ಕೆಳಕಂಡಂತೆ ಆಯುವ್ಯಯದಲ್ಲಿ ಹಣವನ್ನು ನಿಗದಿಪಡಿಸಲಾಗಿದೆ.

1) ಸಹಾಯಧನ	ರೂ. 650 ಕೋಟಿ
2) ಸಾಗಾಣಿಕೆ	ರೂ. 70 ಕೋಟಿ
ಒಟ್ಟು	**ರೂ. 720 ಕೋಟಿ**

Annexure

Sl. No.	Name of the District	Name of families identified				
		Annapurna	AAY	BPL	APL	Total
1	2	3	4	5	6	7
1.	ಬಾಗಲಕೋಟೆ	1831	47660	166840	163117	379448
2	ಬೆಂಗಳೂರು ಅಪ	0	18769	200961	760156	979886
3	ಬೆಂಗಳೂರು (ಗ್ರಾ)	3164	35729	238623	197886	475402
4	ಬೆಂಗಳೂರು (ನ)	861	15898	139506	201776	358041
5	ಬೆಳಗಾಂ	2706	96677	448497	4200005	967868
6	ಬಳ್ಳಾರಿ	0	66486	170194	211878	448368
7	ಬೀದರ್	2004	45175	137097	135312	319589
8	ಬಿಜಾಪುರ	658	56556	165181	162899	385294
9	ಚಾಮರಾಜನಗರ	1624	36075	135792	68817	242308
10	ಚಿಕ್ಕಮಗಳೂರು	727	23537	134097	118308	2766
11	ಚಿತ್ರದುರ್ಗ	0	47378	180544	132870	360792
12	ದಕ್ಷಿಣ ಕನ್ನಡ	351	15881	135324	216543	3685
13	ದಾವಣಗೆರೆ	0	53933	176309	192878	4231
14	ಧಾರವಾಡ	1452	32809	165484	171374	371119
15	ಗದಗ್	37	31737	88063	96107	215944
16	ಗುಲ್ಬರ್ಗಾ	2698	104530	295210	298893	701331
17	ಹಾಸನ	0	25098	270115	139310	434522
18	ಹಾವೇರಿ	1864	50536	117296	128450	298148
19	ಕೊಡಗು	485	6128	78474	60784	145871

1	2	3	4	5	6	7
20	ಕೋಲಾರ	4373	65916	300289	245846	616424
21	ಕೊಪ್ಪಳ	210	42062	92597	119285	254154
22	ಮಂಡ್ಯ	333	37209	238907	179160	455609
23	ಮೈಸೂರು	2782	51104	329791	305688	689365
24	ರಾಯಚೂರು	2343	60279	127551	173800	363973
25	ಶಿವಮೊಗ್ಗ	1631	41463	159282	182950	385326
26	ತುಮಕೂರು	2907	56307	312768	206122	578104
27	ಉಡುಪಿ	459	17872	87897	114563	220791
28	ಉತ್ತರ ಕನ್ನಡ	644	16895	151509	131134	30018
	ಒಟ್ಟು	**36644**	**1199700**	**5244198**	**5535911**	**12016483**

591(993) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಔರಾದ್) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ಮಾರುಕಟ್ಟೆ ಇಲಾಖೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಕಳೆದ 2 ವರ್ಷಗಳಿಂದ ಇಲ್ಲಿಯವರೆವಿಗೆ ನಬಾರ್ಡ್‌ನಿಂದ ರಾಜ್ಯಕ್ಕೆ ಬಂದಿರುವ ಹಣದ ಮೊತ್ತವೆಷ್ಟು (ಜಿಲ್ಲಾವಾರು ಹಂಚಿಕೆ ಮಾಡಲಾದ ಹಣದ ವಿವರ ನೀಡುವುದು):

ಆ) ಮೇಲ್ಕಂಡ ನಬಾರ್ಡ್ ಅನುದಾನದಿಂದ ಪ್ರತಿ ಜಿಲ್ಲೆಯಲ್ಲಿ ಕೃಷಿ ಮಾರುಕಟ್ಟೆ ಇಲಾಖೆಯಿಂದ ತೆಗೆದುಕೊಂಡಿರುವ ಕಾಮಗಾರಿಗಳ ವಿವರಗಳೇನು? ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು;

ಇ) ಪ್ರಸಕ್ತ ಸಾಲಿನಲ್ಲಿ ನಬಾಡ್ ಅನುದಾನದಿಂದ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲು ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿದೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ) ನಬಾಡ್ ನೆರವಿನಿಂದ ಗ್ರಾಮೀಣ ಸಂತೆಗಳ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದು ಅದರ ಮೇರೆಗೆ ನಬಾರ್ಡ್‌ನಿಂದ ರೂ 1532-17 ಲಕ್ಷಗಳು ಬಿಡುಗಡೆಯಾಗಿರುತ್ತದೆ. ವಿವರವನ್ನು ಅನುಬಂಧ-1ರಲ್ಲಿ ನೀಡಿದೆ.

ಆ) ವಿವರ ಅನುಬಂಧ-2ರಲ್ಲಿ ನೀಡಿದೆ.

ಇ) ಗ್ರಾಮೀಣ ಸಂತೆಗಳ ಅಭಿವೃದ್ಧಿಗಾಗಿ ರೂಪಿಸಿರುವ ಆರ್.ಐ.ಡಿ.ಎಫ್-XII ಯೋಜನೆಯಡಿ ಗ್ರಾಮೀಣ ಸಂತೆಗಳನ್ನು ಗುರ್ತಿಸಿ ಅಭಿವೃದ್ಧಿಪಡಿಸಲು ಮಾನ್ಯ ಶಾಸಕರುಗಳು/ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಬಂದಿರುವ ಪ್ರಸ್ತಾವನೆಗಳನ್ನು ಅನುಬಂಧ-3 ರಲ್ಲಿ ನೀಡಿದೆ.